# ಸಾಮಾನ್ಯ ಅವಲೋಕನ

## ಆರ್ಥಿಕ ವಲಯ

ಆರ್ಥಿಕ ವಲಯಕ್ಕೆ ಸಂಬಂಧಿಸಿರುವಂತಹ ಈ ವರದಿಯ ಭಾಗ – I 'ಕರ್ನಾಟಕ ಮೃಗಾಲಯ ಪ್ರಾಧಿಕಾರದಿಂದ ಮೃಗಾಲಯಗಳ ನಿರ್ವಹಣೆ' ಈ ವಿಷಯದ ಮೇಲಿನ ಒಂದು ಅನುಪಾಲನಾ ವರದಿಯನ್ನೂ ಒಳಗೊಂಡಂತೆ ಏಳು ಕಂಡಿಕೆಗಳನ್ನು ಒಳಗೊಂಡಿರುತ್ತದೆ.

## "ಕರ್ನಾಟಕದ ಮೃಗಾಲಯ ಪ್ರಾಧಿಕಾರದಿಂದ ಮೃಗಾಲಯಗಳ ನಿರ್ವಹಣೆ" ಮೇಲೆ ಅನುಪಾಲನಾ ಲೆಕ್ಕಪರಿಶೋಧನೆ

ದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಎಲ್ಲಾ ಮೃಗಾಲಯಗಳು ಕೇಂದ್ರ ಮೃಗಾಲಯ ಪ್ರಾಧಿಕಾರವು ನಿರ್ದಿಷ್ಟಪಡಿಸಿರುವಂತಹ ಪ್ರಮಾಣಕಗಳನ್ನು ಪಾಲಿಸತಕ್ಕದ್ದು ಹಾಗೂ ಕರ್ನಾಟಕದ ಮೃಗಾಲಯ ಪ್ರಾಧಿಕಾರವು ತನ್ನ ಅಧಿಕಾರ ವ್ಯಾಪ್ತಿಯಲ್ಲಿರುವ ಮೃಗಾಲಯಗಳು ಅಂತಹ ಪ್ರಮಾಣಕಗಳನ್ನು ಪಾಲಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಆದಾಗ್ಯೂ,

- ಎಂಟು ಮೃಗಾಲಯಗಳ ಮನ್ನಣೆಯನ್ನು ಇನ್ನೂ ನವೀಕರಿಸಬೇಕಿದೆ ಹಾಗೂ ಅಮಾನತ್ತಿನಲ್ಲಿಟ್ಟಿರುವಂತಹ ಎರಡು ಮೃಗಾಲಯಗಳು ಸಾರ್ವಜನಿಕರ ವೀಕ್ಷಣೆಗೆ ಮುಕ್ತವಾಗಿದ್ದವು.
- ಕಮಲಾಪುರದ ಮೃಗಾಲಯವನ್ನು 2017–18 ಮತ್ತು 2018–19 ಸಾಲುಗಳಲ್ಲಿ ಕೇಂದ್ರ ಮೃಗಾಲಯ ಪ್ರಾಧಿಕಾರದ ಮನ್ನಣೆಯನ್ನು ಪಡೆದುಕೊಳ್ಳದೆಯೇ ಕಾರ್ಯಾಚರಣೆಗೊಳಿಸಲಾಗಿದ್ದಿತು.
- ಕೇವಲ ಮೂರು ಮೃಗಾಲಯಗಳು, ಅವೆಂದರೆ ಮೈಸೂರು ಮೃಗಾಲಯ, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು ಹಾಗೂ ಕಮಲಾಪುರದ ಮೃಗಾಲಯಗಳು ಅನುಮೋದಿತ ಪೂರ್ವಭಾವಿ ಯೋಜನೆಗಳನ್ನು ಹೊಂದಿದ್ದವು, ಎರಡು ಮೃಗಾಲಯಗಳು ಅನುಮೋದಿತ ಪೂರ್ವಭಾವಿ ಯೋಜನೆಗಳನ್ನೂ ಕೂಡ ಹೊಂದಿರಲಿಲ್ಲ.

- ಸಮರ್ಪಕ ಪ್ರಾಣಿಸಂಖ್ಯಾ ನಿಯಂತ್ರಣ ಕ್ರಮಗಳನ್ನು ಅನುಸರಿಸಿರಲಿಲ್ಲ, ಮೃಗಾಲಯಗಳಲ್ಲಿ ಪ್ರಾಣಿಗಳು ಹೆಚ್ಚುವರಿ ಸಂಖ್ಯೆಗಳಲ್ಲಿದ್ದವು, ಒಂಟಿ ಪ್ರಾಣಿಗಳನ್ನು ಜೋಡಿ ಮಾಡುವುದರ ಮೇಲಿನ ಕೇಂದ್ರ ಮೃಗಾಲಯ ಪ್ರಾಧಿಕಾರದ ಪ್ರಮಾಣಕಗಳನ್ನು ಅನುಸರಿಸಿರಲಿಲ್ಲ.

- ಪೈಕಿ ಏಳರಲ್ಲಿ ಸಮರ್ಪಕ ಪಶುವೈದ್ಯಕೀಯ ಮೂಲಸೌಕರ್ಯಗಳು ಇರಲಿಲ್ಲ. ಕೇವಲ ಮೈಸೂರು ಮೃಗಾಲಯವು ಮಾತ್ರ ಝೂನಾಟಿಕ್ ರೋಗಗಳಿಗಾಗಿ ಪ್ರಾಣಿ ಪೋಷಕರುಗಳನ್ನು ಒಂದು ವರ್ಷ ಮಾತ್ರ ಪರೀಕ್ಷಿಸಲಾಯಿತು. ಕೇಂದ್ರ ಮೃಗಾಲಯ ಪ್ರಾಧಿಕಾರವು ಕಡ್ಡಾಯಗೊಳಿಸಿರುವಂತಹ ಆರೋಗ್ಯ ಸಲಹಾ ಸಮಿತಿಗಳು ಆರು ಮೃಗಾಲಯಗಳಲ್ಲಿ ಸ್ಥಾಪನೆಯಾಗಿರಲಿಲ್ಲ.
- ವನ್ಯಜೀವಿಗಳ ಪಾಲನೆಪೋಷಣೆ ಹಾಗೂ ಸಂರಕ್ಷಣೆಗಾಗಿ ಪ್ರಮುಖವಾಗಿರುವಂತಹ ಸಂಶೋಧನೆ ಮತ್ತು ಶಿಕ್ಷಣಕ್ಕೆ ಸಾಕಷ್ಟು ಪ್ರಾಮುಖ್ಯತೆಯನ್ನು ನೀಡಿರಲಿಲ್ಲ.
- ನೇಮಕ ಮಾಡಲಾಗಿದ್ದಂತಹ ಸಿಬ್ಬಂದಿ ಸಂಖ್ಯೆಯು ಮೃಗಾಲಯಗಳಲ್ಲಿ ಅನುಮೋದನೆಗೊಂಡಿದ್ದ ಹುದ್ದೆಗಳಿಗಿಂತಲೂ ಅಧಿಕ ಪ್ರಮಾಣದಲ್ಲಿದ್ದಿತು.

**(ಕಂಡಿಕೆ 2.1)**

*ಅನುಪಾಲನಾ ಲೆಕ್ಕಪರಿಶೋಧನೆಯ ಕಂಡಿಕೆಗಳು*

ದರಗಳ ಪಟ್ಟಿಯು ಕಾಮಗಾರಿಯ ನಿರ್ದಿಷ್ಟ ಬಾಬ್ತಿಗೆ ನಿರ್ದಿಷ್ಟ ದರವನ್ನು ಅನುವು ಮಾಡಿರುತ್ತದೆ. ಅರಣ್ಯ ಪ್ರದೇಶದಲ್ಲಿ ಕೆರೆಗಳಿಂದ ಹೂಳೆತ್ತುವ ಸಲುವಾಗಿ ತಪ್ಪಾದ ಬಾಬನ್ನು ಅಳವಡಿಸಿಕೊಂಡಿದ್ದು ಗುತ್ತಿಗೆದಾರರುಗಳಿಗೆ ₹ 2.64 ಕೋಟಿ ಮೊತ್ತವನ್ನು ಅಧಿಕ ಪ್ರಮಾಣದಲ್ಲಿ ಪಾವತಿಸುವಲ್ಲಿ ಪರಿಣಮಿಸಿದ್ದಿತು.

**(ಕಂಡಿಕೆ 2.2)**

ಪರಿಹಾರಕ ಅರಣ್ಯೀಕರಣ ಶುಲ್ಕಗಳನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದಿತು (₹ 3.05 ಕೋಟಿ) ಹಾಗೂ ಪರಿಹಾರಕ ಅರಣ್ಯೀಕರಣಕ್ಕಾಗಿ ಗೇಣಿ ಒಪ್ಪಂದದಾರರಿಂದ ಅರಣ್ಯೇತರ ಭೂಮಿಯನ್ನು (81.29 ಹೆಕ್ಟೇರು) ಪಡೆದುಕೊಳ್ಳಲಿಲ್ಲ.

**(ಕಂಡಿಕೆ 2.3)**

ಹೊಸ ಯೋಜನೆಯೊಂದಕ್ಕೆ ಅನುಮೋದನೆಯನ್ನು ನೀಡಲಾಯಿತಾದ್ದರಿಂದ ನಾಲ್ಕು ಕೆರೆಗಳಿಗೆ ನೀರು ಪೂರೈಸುವ ಸಲುವಾಗಿ, ನೀರು ಪೂರೈಸುವ ಪೋಷಕ ಕಾಲುವೆ (ಫೀಡರ್ ಕೆನಾಲ್) ಕಾಮಗಾರಿಯನ್ನು ಕೈಬಿಡಲಾಗಿದ್ದಿತು, ಇದು ₹ 17.50 ಕೋಟಿ ಮೊತ್ತದಷ್ಟು ವೆಚ್ಚವು ನಿಷ್ಫಲವಾಗುವಲ್ಲಿ ಪರಿಣಮಿಸಿದ್ದಿತು.

**(ಕಂಡಿಕೆ 2.4)**

ಬಿಟ್ಯುಮಿನ್‌ಯುಕ್ತ ಮೇಲ್ಪದರವನ್ನು ತೆಗೆಯುವಲ್ಲಿ ತಪ್ಪಾದ ಬಾಬನ್ನು ಅಳವಡಿಸಿಕೊಂಡಿದ್ದು ಹಾಗೂ ರಸ್ತೆ ಅಭಿವೃದ್ಧಿ ಕಾಮಗಾರಿಗಳಲ್ಲಿ ಅಗತ್ಯ ಸಂಬಂಧಿತ ಕಾಮಗಾರಿಗಳಿಗೆ ಪ್ರತ್ಯೇಕ ಬಾಬನ್ನು ಸೇರಿಸಿದ್ದು ಗುತ್ತಿಗೆದಾರರುಗಳಿಗೆ ₹ 3.90 ಕೋಟಿ ಮೊತ್ತದಷ್ಟು ಅನರ್ಹ ಲಾಭವನ್ನು ಮಾಡಿಕೊಡುವಲ್ಲಿ ಪರಿಣಮಿಸಿದ್ದಿತು.

**(ಕಂಡಿಕೆ 2.5)**

ನಿರ್ದಿಷ್ಟ ನಿರೂಪಣಗಳ ಅನುಸಾರ ಮೇಲ್ಛಾವಣಿಗೆ ಪ್ಲಾಸ್ಟರ್ ಮಾಡುವುದು ಆರ್‌ಸಿಸಿ ಕಾಮಗಾರಿಯ ಒಂದು ಅಂತರ್ಗತ ಭಾಗವಾಗಿರುತ್ತದೆ, ಆದರೆ ಅದನ್ನು ಕಟ್ಟಡಗಳ ನಿರ್ಮಾಣದ ಗುತ್ತಿಗೆ ಒಡಂಬಡಿಕೆ ಪತ್ರದಲ್ಲಿ ಒಂದು ಪ್ರತ್ಯೇಕ ಬಾಬಾಗಿ ಸೇರಿಸಲಾಗಿದ್ದಿತು, ಇದು ₹ 1.93 ಕೋಟಿ ಮೊತ್ತವನ್ನು ಅಧಿಕ ಪ್ರಮಾಣದಲ್ಲಿ ಪಾವತಿಸುವಲ್ಲಿ ಪರಿಣಮಿಸಿದ್ದಿತು.

**(ಕಂಡಿಕೆ 2.6)**

ಭಾರತೀಯ ರಸ್ತೆ ಕಾಂಗ್ರೆಸ್ಸಿನ ಪರಿಷ್ಕೃತ ಪ್ರಮಾಣಕಗಳನ್ನು ನಿರ್ಲಕ್ಷಿಸಿ ರಸ್ತೆ ಅಬಿವೃದ್ಧಿ ಕಾಮಗಾರಿಗಳಲ್ಲಿ ಹೆಚ್ಚುವರಿ ಪ್ರತಿಬಿಂಬಕ ಪಾದಚಾರಿ ಮಾರ್ಗ ಸೂಚಕಗಳನ್ನು ಅನುವು ಮಾಡಲಾಗಿದ್ದಿತು, ಇದು ₹ 6.62 ಕೋಟಿ ಮೊತ್ತದಷ್ಟು ಅನಗತ್ಯ ವೆಚ್ಚವಾಗುವಲ್ಲಿ ಪರಿಣಮಿಸಿದ್ದಿತು.

**(ಕಂಡಿಕೆ 2.7)**

## ರಾಜಸ್ವ ವಲಯ

ರಾಜಸ್ವ ಸ್ವೀಕೃತಿಗಳಿಗೆ ಸಂಬಂದಿಸಿದಂತ್ತೆ ಈ ವರದಿಯ ಭಾಗ–IIರಲ್ಲಿ ₹ 1092.70 ಕೋಟಿ ಮೊತ್ತವು ಒಳಗೊಂಡಂತೆ ತೆರಿಗೆ, ಬಡ್ಡಿ, ದಂಡವನ್ನು ವಿಧಿಸದಿರುವುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿರುವುದು, ರಾಜಸ್ವ/ವರಮಾನವನ್ನು ಬಿಟ್ಟುಕೊಟ್ಟಿರುವುದು, ಇವುಗಳಿಗೆ ಸಂಬಂಧಿಸಿದಂತೆ ಒಂದು ಅನುಪಾಲನಾ ಲೆಕ್ಕಪರಿಶೋಧನೆಯೂ ಸೇರಿದಂತೆ 17 ಕಂಡಿಕೆಗಳನ್ನು ಒಳಗೊಂಡಿರುತ್ತದೆ. ಗಮನಿಸಲಾಗಿರುವಂತಹ ಕೆಲವು ಪ್ರಮುಖ ಅಂಶಗಳನ್ನು ಈ ಕೆಳಗೆ ತಿಳಿಸಲಾಗಿದೆ:

## I ಸಾಮಾನ್ಯ

ರಾಜ್ಯ ಸರ್ಕಾರದ ಒಟ್ಟಾರೆ ರಾಜಸ್ವ/ವರಮಾನ ಸ್ವೀಕೃತಿಗಳು ಹಿಂದಿನ ಸಾಲಿನ ₹ 1,46,999.65 ಕೋಟಿ ಮೊತ್ತಕ್ಕೆ ಪ್ರತಿಯಾಗಿ 2018–19 ಸಾಲಿಗೆ ₹ 1,64,978.66 ಕೋಟಿ ಮೊತ್ತದಷ್ಟು ಆಗಿದ್ದಿತು. ಈ ಪೈಕಿ ಶೇಕಡಾ 63ರಷ್ಟನ್ನು ರಾಜ್ಯವು ತೆರಿಗೆ ವರಮಾನದ (₹ 96,829.71 ಕೋಟಿ) ಮೂಲಕ ಹಾಗೂ ತೆರಿಗೆಯೇತರ ವರಮಾನದ (₹ 6,772.87 ಕೋಟಿ) ಮೂಲಕ ಸಂಗ್ರಹಿಸಿದ್ದಿತು. ಉಳಿಕೆ ಶೇಕಡಾ 37ರಷ್ಟನ್ನು ಭಾರತ ಸರ್ಕಾರದಿಂದ (ಕೇಂದ್ರ ಸರ್ಕಾರ) ವಿಭಜನೀಯ ಕೇಂದ್ರ ತೆರಿಗೆಗಳ ರಾಜ್ಯದ ಪಾಲಾಗಿ (₹ 35,894.83 ಕೋಟಿ) ಹಾಗೂ ಸಹಾಯಾನುದಾನಗಳನ್ನಾಗಿ (₹ 25,481.25 ಕೋಟಿ) ಸ್ವೀಕರಿಸಲಾಗಿದ್ದಿತು.

**(ಕಂಡಿಕೆ 1.1)**

1,359 ಪರೀಕ್ಷಣಾ ವರದಿಗಳಲ್ಲಿ ₹ 1,822.98 ಕೋಟಿ ಮೊತ್ತವು ಒಳಗೊಂಡಂತೆ 3,802 ಕಂಡಿಕೆಗಳು ಜೂನ್ 2019ರ ಅಂತ್ಯದಲ್ಲಿದ್ದಂತೆ ಇಲಾಖೆಗಳಲ್ಲಿ ಇತ್ಯರ್ಥಗೊಳ್ಳಲು ಬಾಕಿ ಉಳಿದಿದ್ದವು.

**(ಕಂಡಿಕೆ 1.5)**

ಮಾರಾಟಗಳ ಮೇಲಿನ ತೆರಿಗೆ/ಮೌಲ್ಯ ವರ್ಧಿತ ತೆರಿಗೆ, ರಾಜ್ಯ ಅಬಕಾರಿ, ಮೋಟಾರು ವಾಹನಗಳ ಮೇಲಿನ ತೆರಿಗೆಗಳು, ಮುದ್ರಾಂಕಗಳು ಮತ್ತು ನೋಂದಣಿ ಶುಲ್ಕ, ಭೂ ಕಂದಾಯ ಮತ್ತು ಇತರೆ ಇಲಾಖಾ ಕಚೇರಿಗಳ 303 ಘಟಕ/ಕಚೇರಿಗಳ ದಾಖಲೆಗಳ 2018–19 ಸಾಲಿನಲ್ಲಿ ನಡೆಸಲಾದಂತಹ ಪರೀಕ್ಷಾ–ಪರಿಶೀಲನೆಯು 763 ಕಂಡಿಕೆಗಳ ಮೂಲಕ ಸ್ಪಷ್ಟಪಡಿಸಲಾಗಿರುವಂತಹ ಪ್ರಕರಣಗಳಲ್ಲಿ ₹ 1502.73 ಕೋಟಿ ಮೊತ್ತದಷ್ಟು ಒಟ್ಟಾರೆ ರಾಜಸ್ವ/ವರಮಾನವನ್ನು ಕಡಿಮೆ ಪ್ರಮಾಣದಲ್ಲಿ ನಿರ್ಧಾರಣೆ ಮಾಡಿರುವುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿರುವುದು/ರಾಜಸ್ವ/ವರಮಾನದ ನಷ್ಟ, ಇತ್ಯಾದಿಗಳನ್ನು ತೋರಿಸಿಕೊಟ್ಟಿತು.

**(ಕಂಡಿಕೆ 1.8)**

## II ಮಾರಾಟಗಳು, ವ್ಯಾಪಾರ, ವ್ಯವಹಾರಗಳ ಮೇಲಿನ ತೆರಿಗೆಗಳು/ಮೌಲ್ಯ ವರ್ಧಿತ ತೆರಿಗೆ

**“ಕರ್ನಾಟಕದಲ್ಲಿ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ ಅಧಿನಿಯಮಗಳ ಅಡಿಯಲ್ಲಿ ಮಧ್ಯಂತರ/ಪರಿವರ್ತನಾ ಕಾಲದ (Transitional) ಅನುವುಗಳನ್ನು ಕಾರ್ಯಗತಗೊಳಿಸಿದ್ದು” ಈ ವಿಷಯದ ಮೇಲೆ ಒಂದು ಅನುಪಾಲನಾ ಲೆಕ್ಕಪರಿಶೋಧನೆ**

**ನೋಂದಣಿ**

ಈ ಕೆಳಗಿನವುಗಳನ್ನು ಹೊರತುಪಡಿಸಿದಂತೆ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಗೆ ವರ್ತಕರುಗಳ ಸ್ಥಳಾಂತರವು ತಕ್ಕಮಟ್ಟಿಕೆ ಪೂರ್ಣಗೊಂಡಿದ್ದಿತು.

- ✓ ಆಯ್ಕೆ ಮಾಡಿಕೊಳ್ಳಲಾಗಿದ್ದಂತಹ ಆರು ವಿಭಾಗಗಳಲ್ಲಿ ವಾರ್ಷಿಕ ₹ 20 ಲಕ್ಷ ಮೊತ್ತದ ಮಿತಿಯನ್ನು ಮೀರಿದ್ದಂತಹ 2,820 ವರ್ತಕರುಗಳು ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಗೆ ಸ್ಥಳಾಂತರಗೊಂಡಿರಲಿಲ್ಲ.
- ✓ ವಾರ್ಷಿಕ ₹ 20 ಲಕ್ಷ ಮೊತ್ತದ ಮಿತಿಯನ್ನು ಮೀರಿದ್ದಂತಹ, ಆದರೆ ಅನೂರ್ಜಿತ ಪಿಎಎನ್ (PAN) ಹೊಂದಿದ್ದಂತಹ 7,193 ವರ್ತಕರುಗಳು ಸರಕುಗಳು ಮತ್ತು

ಸೇವೆಗಳ ಮೇಲಿನ ತೆರಿಗೆಗೆ ಸ್ಥಳಾಂತರ ಹೊಂದುವುದನ್ನು ಇಲಾಖೆಯು ಖಚಿತಪಡಿಸಿಕೊಂಡಿರಲಿಲ್ಲ.

**(ಕಂಡಿಕೆ ಸಂಖ್ಯೆ 2.4.8.4 ಮತ್ತು 2.4.8.5)**

ಗುತ್ತಿಗೆದಾರರುಗಳು ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ ಅಡಿಯಲ್ಲಿ ತೆರಿಗೆಯ ಸಂಯೋಜನಾ ಯೋಜನೆಗೆ ಅರ್ಹತೆಯನ್ನು ಹೊಂದಿರಲಿಲ್ಲವಾದರೂ, ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಡಿಯಲ್ಲಿನ 273 ಕಾಮಗಾರಿಗಳ ಗುತ್ತಿಗೆದಾರರುಗಳು ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ ಅಡಿಯಲ್ಲಿಯೂ ತೆರಿಗೆಯ ಸಂಯೋಜನಾ ಯೋಜನೆಯ ಅಡಿಯಲ್ಲಿ ಮುಂದುವರೆದಿದ್ದರು.

**(ಕಂಡಿಕೆ ಸಂಖ್ಯೆ 2.4.8.6)**

**ಸಲ್ಲಿಕೆಗಳ ಸಲ್ಲಿಕೆ**

ಜಿಎಸ್‌ಟಿಆರ್–1 (ಹೊರ ಸರಬರಾಜುಗಳು/ಮಾರಾಟಗಳು) ಹಾಗೂ ಜಿಎಸ್‌ಟಿಆರ್–3ಬಿ (ಸಂಕ್ಷಿಪ್ತ ಮಾಸಿಕ ಸಲ್ಲಿಕೆ) ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ಅನುಸರಣಾ ಕ್ರಮಗಳನ್ನು ಶ್ಲಾಘನೀಯವಾಗಿ ಮಾಡಲಾಗಿದ್ದಿತಾದಲ್ಲಿ ಜಿಎಸ್‌ಟಿಆರ್–2ನ್ನು (ಒಳ ಸರಬರಾಜುಗಳು/ಖರೀದಿಗಳು) ಮಾಹಿತಿ ತಂತ್ರಜ್ಞಾನ ಮೂಲಸೌಕರ್ಯವನ್ನು ಕಾರ್ಯಗತಗೊಳಿಸುವಲ್ಲಿನ ವಿಫಲತೆಯ ಕಾರಣ ಪ್ರಾರಂಭಿಸಲಾಗಿರಲಿಲ್ಲ.

'ಜಿಎಸ್‌ಟಿಆರ್–1' ಮತ್ತು 'ಜಿಎಸ್‌ಟಿಆರ್–3ಬಿ'ಗಳ ಅಂಕಿಸಂಖ್ಯೆಗಳ ಸಲ್ಲಿಕೆಗೆ ಸಂಬಂಧಿಸಿದಂತೆ ಕೇಂದ್ರ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ ಪೋರ್ಟಲು ಹಾಗೂ ರಾಜ್ಯ ಪೋರ್ಟಲಿನ ನಡುವೆ ಗಮನಾರ್ಹವಾದಂತಹ ವ್ಯತ್ಯಯಗಳಿದ್ದವು ಹಾಗೂ ರಾಜ್ಯ ಪೋರ್ಟಲಿನಲ್ಲಿನ ಅಂಕಿಸಂಖ್ಯೆಗಳು ಕೇಂದ್ರ ಅಂಕಿಸಂಖ್ಯೆಗಳಿಗಿಂತ ಅವಾಸ್ತವಿಕವಾಗಿ ಅಧಿಕ ಪ್ರಮಾಣದಲ್ಲಿದ್ದವು.

**(ಕಂಡಿಕೆ ಸಂಖ್ಯೆ 2.4.9.1)**

ಹೊರ ಸರಬರಾಜುಗಳು/ಮಾರಾಟಗಳು ಹಾಗೂ ಒಳ ಸರಬರಾಜುಗಳು/ಖರೀದಿಗಳ ಊಡಿಕೆಯು ಅಪೂರ್ಣವಾಗಿದ್ದಿತಾದ್ದರಿಂದ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ ಅಡಿಯಲ್ಲಿ ಇನ್ವಾಯ್ಸುಗಳ ತಾಳೆಹೊಂದಿಸುವುದನ್ನು ಸಾಧಿಸಲಾಗಲಿಲ್ಲ, ಇದನ್ನು ಕರ್ನಾಟಕದಲ್ಲಿ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಡಿಯಲ್ಲಿ ಇಯುಪಿಎಎಸ್‌ಎಸ್ (eUPaSS) ಅಡಿಯಲ್ಲಿ ಬಹಳಷ್ಟು ಮಟ್ಟಿಗೆ ಸಾಧಿಸಲಾಗಿದ್ದಿತು.

**(ಕಂಡಿಕೆ ಸಂಖ್ಯೆ 2.4.9.2)**

**ಮಧ್ಯಂತರ/ಪರಿವರ್ತನಾ ಕಾಲದ ತೆರಿಗೆ ಜಮೆ**

ಇಲಾಖೆಯು ಅಳವಡಿಸಿಕೊಂಡಿದ್ದಂತಹ ಸಂಭಾವ್ಯ ಅಪಾಯದ ನಿರ್ಧಾರಣೆಯು ಜೂನ್ 2017ರ ಸಲ್ಲಿಕೆಗಳಲ್ಲಿ ಲಭ್ಯವಿದ್ದಂತಹ ಅಧಿಕ ಪ್ರಮಾಣದ ತೆರಿಗೆ ಜಮೆಗೆ ಹೋಲಿಸಿದಂತೆ ವರ್ತಕರು ಕೋರಿದ್ದಂತಹ ತೆರಿಗೆ ಜಮೆಯಲ್ಲಿ ಕಡಿಮೆ ಪ್ರಮಾಣದ ಸಂಭಾವ್ಯ ಅಪಾಯವನ್ನು ಸೂಚಿಸುತ್ತಿದ್ದಿತಾದ್ದರಿಂದ, ಮಧ್ಯಂತರ/ಪರಿವರ್ತನಾ ಕಾಲದ ತೆರಿಗೆ ಜಮೆಯ ಯಥಾರ್ಥತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಯಾವುದೇ ಕ್ರಿಯಾ ಯೋಜನೆಯನ್ನೂ ರೂಪಿಸಿರಲಿಲ್ಲ.

**(ಕಂಡಿಕೆ ಸಂಖ್ಯೆ 2.4.10.1)**

ಮಾದರಿ ಆಯ್ಕೆ ಮಾಡಿಕೊಳ್ಳಲಾದಂತಹ ಆರು ವಿಭಾಗಗಳಲ್ಲಿ 25,687 ಪ್ರಕರಣಗಳಲ್ಲಿ ವರ್ತಕರು ಕೋರಿದ್ದಂತಹ ತೆರಿಗೆ ಜಮೆಯ ಕೋರಿಕೆಯನ್ನು ಲೆಕ್ಕಪರಿಶೋಧನೆಯು ಪ್ರಕರಣವಾರು ಪರಿಶೀಲಿಸಲಾಗಿ 480 ವರ್ತಕರುಗಳು ₹ 40.74 ಕೋಟಿ ಮೊತ್ತದಷ್ಟು ತೆರಿಗೆ ಜಮೆಯನ್ನು ಅಧಿಕ ಪ್ರಮಾಣದಲ್ಲಿ ಕೋರಿದ್ದರು ಹಾಗೂ 490 ವರ್ತಕರುಗಳು ₹ 47.04 ಕೋಟಿ ಮೊತ್ತದಷ್ಟು ಅನರ್ಹ ತೆರಿಗೆ ಜಮೆಯನ್ನು ಕೋರಿದ್ದರು ಎಂಬುದನ್ನು ತೋರಿಸಿಕೊಟ್ಟಿತು.

**(ಕಂಡಿಕೆ ಸಂಖ್ಯೆ 2.4.10.2)**

ಮಧ್ಯಂತರ/ಪರಿವರ್ತನಾ ಕಾಲದ ತೆರಿಗೆ ಜಮೆಗಳನ್ನು ನಮೂನೆ ಮೌವತೆ 240, ಪುನರ್–ಕರನಿರ್ಧಾರಣಾ ಆದೇಶಗಳು, ಮೂಲದಲ್ಲಿಯೇ ಕಡಿದುಕೊಳ್ಳಲಾದ ತೆರಿಗೆ ಪ್ರಮಾಣಪತ್ರಗಳು, ಇತ್ಯಾದಿಗಳಂತಹ ಇತರೆ ಸಂಬಂಧಿತ ದಾಖಲೆಗಳ ಜೊತೆಯಲ್ಲಿ ಲೆಕ್ಕಪರಿಶೋಧನೆಯು 611

ಪ್ರಕರಣಗಳಲ್ಲಿ ಅಡ್ಡ–ಪರಿಶೀಲನೆ ಮಾಡಲಾಗಿ, 141 ವರ್ತಕರಿಗೆ ಸಂಬಂಧಿಸಿದಂತೆ ₹ 855.61 ಕೋಟಿ ಮೊತ್ತದಷ್ಟು ಮಧ್ಯಂತರ ತೆರಿಗೆ ಜಮೆಯನ್ನು ತಪ್ಪಾಗಿ ಕೋರಿರುವುದನ್ನು ತೋರಿಸಿಕೊಟ್ಟಿತು.

**(ಕಂಡಿಕೆ ಸಂಖ್ಯೆ 2.4.10.3)**

234 "ಹೊಸ" ನೋಂದಣಿಗಳು ಹಾಗೂ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ (ಜಿಎಸ್‌ಟಿ) ಅಡಿಯಲ್ಲಿ "ಸಂಯೋಜನಾ ತೆರಿಗೆ" ಅಡಿಯಲ್ಲಿನ 800 ವರ್ತಕರುಗಳು, ಇವೆರಡು ಪ್ರವರ್ಗಗಳು ಈ ಹಿಂದಿನ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದ ಅಡಿಯಲ್ಲಿ ಖರೀದಿಗಳ ಮೇಲಿನ ತೆರಿಗೆ ಜಮೆಗೆ ಅರ್ಹತೆಯನ್ನು ಹೊಂದಿರಲಿಲ್ಲವಾದರೂ ₹ 137.24 ಕೋಟಿ ಮೊತ್ತದಷ್ಟು ಮಧ್ಯಂತರ/ಪರಿವರ್ತನಾ ಕಾಲದ ತೆರಿಗೆ ಜಮೆಯನ್ನು ಕೋರಿದ್ದರು.

**(ಕಂಡಿಕೆ ಸಂಖ್ಯೆ 2.4.10.5)**

113 ವರ್ತಕರುಗಳು ಕೇಂದ್ರ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ ಅಡಿಯಲ್ಲಿ ₹ 59.96 ಕೋಟಿ ಮೊತ್ತದಷ್ಟು ಮಧ್ಯಂತರ ತೆರಿಗೆ ಜಮೆಯನ್ನು ತಪ್ಪಾಗಿ/ಅಧಿಕ ಪ್ರಮಾಣದಲ್ಲಿ ಕೋರಿದ್ದರು.

**(ಕಂಡಿಕೆ ಸಂಖ್ಯೆ 2.4.11.1)**

ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ ಅಡಿಯಲ್ಲಿ ಶಿಕ್ಷಣ ಸೆಸ್ಸು, ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣ ಸೆಸ್ಸು ಹಾಗೂ ಕೃಷಿ ಕಲ್ಯಾಣ ಸೆಸ್ಸು ಮಧ್ಯಂತರ ತೆರಿಗೆ ಜಮೆಗೆ ಅರ್ಹತೆಯನ್ನು ಹೊಂದಿರಲಿಲ್ಲವಾದರೂ 56 ವರ್ತಕರುಗಳಿಗೆ ಸಂಬಂಧಿಸಿದಂತೆ ಸೆಸ್ಸುಗಳ ಅಡಿಯಲ್ಲಿ ₹ 61.84 ಕೋಟಿ ಮೊತ್ತದಷ್ಟು ತೆರಿಗೆ ಜಮೆಯನ್ನು ಅನುಮತಿಸಲಾಗಿದ್ದಿತು.

**(ಕಂಡಿಕೆ ಸಂಖ್ಯೆ 2.4.11.2)**

**ಈ ಹಿಂದಿನ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದ ಅಡಿಯಲ್ಲಿ ಮರುಪಾವತಿಗಳು ಹಾಗೂ ಕರನಿರ್ಧಾರಣೆಗಳು**

ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಡಿಯಲ್ಲಿ ಸಲ್ಲಿಸಲಾಗಿದ್ದಂತಹ ಮರುಪಾವತಿಗಾಗಿನ ಕೋರಿಕೆಗಳ ಅನುಸಾರ, ಮರುಪಾವತಿಗಾಗಿನ ಕೋರಿಕೆಗಳು ₹ 2,536.66 ಕೋಟಿ ಮೊತ್ತದಷ್ಟಿದ್ದವು, ಆದಾಗ್ಯೂ, ಇಲಾಖೆಯು ಸಲ್ಲಿಕೆಗಳಲ್ಲಿನ ಮರುಪಾವತಿಗಾಗಿನ ಸಲುವಾಗಿ ಯಾವುದೇ ಯೋಜನೆಯನ್ನೂ ರೂಪಿಸಿರಲಿಲ್ಲ.

**(ಕಂಡಿಕೆ ಸಂಖ್ಯೆ 2.4.13.1)**

ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದ ಅಡಿಯಲ್ಲಿ ಪುನರ್–ಕರನಿರ್ಧಾರಣೆಗಳನ್ನು ಕೈಗೆತ್ತಿಕೊಳ್ಳಲು ಅರ್ಹತೆಯನ್ನು ಹೊಂದಿರುವಂತಹ ಪ್ರಕರಣಗಳನ್ನು ಗುರುತಿಸುವ ಹಾಗೂ ಈ ಪ್ರಕರಣಗಳು ಕಾಲ ಮಿತಿಯನ್ನು ಮೀರುವುದಕ್ಕೆ ಮುಂಚಿತವಾಗಿಯೇ ಈ ಹಿಂದಿನ ಅಧಿನಿಯಮದ ಅಡಿಯಲ್ಲಿ ತೆರಿಗೆ ವರಮಾನದ ಸಂಗ್ರಹಣೆಯನ್ನು ಅತ್ಯುತ್ತಮಗೊಳಿಸುವ ಸಲುವಾಗಿ ಯಾವುದೇ ಕ್ರಿಯಾ ಯೋಜನೆಯು ದಾಖಲೆಗಳಲ್ಲಿ ಕಂಡುಬರಲಿಲ್ಲ.

**(ಕಂಡಿಕೆ ಸಂಖ್ಯೆ 2.4.13.2)**

**ಕಂಡಿಕೆಗಳು**

314 ಕರದಾತರುಗಳು ತೆರಿಗೆಯನ್ನು ವಿಳಂಬವಾಗಿ ಪಾವತಿಸಿದ್ದಕ್ಕಾಗಿ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದ ಪರಿಚ್ಛೇದ 72 (1)ರ ಅಡಿಯಲ್ಲಿ ದಂಡವನ್ನು ವಿಧಿಸದಿದ್ದುದು ಹಾಗೂ 5,193 ಕರದಾತರುಗಳು ನಮೂನೆ–240ನ್ನು ಸಲ್ಲಿಸದಿದ್ದುದಕ್ಕಾಗಿ ವಿಧಿಸದಿದ್ದಂತಹ ದಂಡದ ಮೊತ್ತವು ₹ 29.82 ಕೋಟಿ ಆಗಿದ್ದಿತು.

**(ಕಂಡಿಕೆ 2.5 ಮತ್ತು 2.12)**

ನಗರ ಪ್ರದೇಶಗಳಲ್ಲಿ ಇದ್ದಂತಹ 104 ಬಾರುಗಳು ಮತ್ತು ರೆಸ್ಟೋರೆಂಟುಗಳು ಮಾರ್ಚ್ 2014ರಿಂದ ಮಾರ್ಚ್ 2017ರ ಅವಧಿಯಲ್ಲಿ ಮಾರಾಟ ಮಾಡಿದ್ದಂತಹ ಮದ್ಯದ ಮೇಲೆ ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು ₹ 17.16 ಕೋಟಿ ಮೊತ್ತದಷ್ಟು (ಬಡ್ಡಿ ಮತ್ತು ದಂಡವೂ ಸೇರಿ) ಆಗಿದ್ದಿತು.

**(ಕಂಡಿಕೆ 2.6)**

ತಮ್ಮ ಸಲ್ಲಿಕೆಗಳಲ್ಲಿ ಘೋಷಿಸಿಕೊಂಡಿದ್ದರಾದರೂ 161 ಕರದಾತರುಗಳು ₹ 5.64 ಕೋಟಿ ಮೊತ್ತದಷ್ಟು (ಬಡ್ಡಿ ಮತ್ತು ದಂಡವೂ ಸೇರಿ) ತೆರಿಗೆಯನ್ನು ಪಾವತಿಸಿರಲಿಲ್ಲ.

**(ಕಂಡಿಕೆ 2.7)**

ಲೆಕ್ಕಪರಿಶೋಧನೆಗೆ ಒಳಪಟ್ಟಂತಹ ಲೆಕ್ಕಪತ್ರಗಳ ತ:ಖ್ತೆಗಳಲ್ಲಿ ಲೆಕ್ಕಪರಿಶೋಧಕರುಗಳು ನಿರ್ಧಾರಣೆ ಮಾಡಿದ್ದಂತೆ, 65 ವರ್ತಕರುಗಳು ₹ 8.92 ಕೋಟಿ ಮೊತ್ತದಷ್ಟು ಹೆಚ್ಚುವರಿ ತೆರಿಗೆ ಬಾಧ್ಯತೆಯನ್ನು ಪಾವತಿಸಿರಲಿಲ್ಲ.

**(ಕಂಡಿಕೆ 2.8)**

ಒಂಬತ್ತು ವರ್ತಕರುಗಳು ತೆರಿಗೆಯನ್ನು ವಿಳಂಬವಾಗಿ ಪಾವತಿಸಿದ್ದಕ್ಕಾಗಿ ಬಡ್ಡಿಯನ್ನು ವಿಧಿಸದಿದ್ದುದು ₹ 2.05 ಕೋಟಿ ಮೊತ್ತದಷ್ಟು ಆಗಿದ್ದಿತು.

**(ಕಂಡಿಕೆ 2.9)**

ವಿನಾಯಿತಿಯನ್ನು ಹೊಂದಿದ್ದಂತಹ ಸರಕುಸಾಮಗ್ರಿಗಳು ಮತ್ತು ಡೀಸೆಲ್ಲಿನ ಮೇಲೆ ಖರೀದಿಗಳ ಮೇಲಿನ ತೆರಿಗೆ ಜಮೆಯನ್ನು ಅನುಮತಿಸಿದ್ದು, ಖರೀದಿಗಳ ಮೇಲಿನ ತೆರಿಗೆ ಜಮೆಯನ್ನು ಲೆಕ್ಕಹಾಕುವಲ್ಲಿನ ತಪ್ಪುಗಳು ಹಾಗೂ ಪ್ರಮಾಣಾನುಗುಣವಾದಂತಹ ಮಾರಾಟಗಳ ಮೇಲಿನ ತೆರಿಗೆಯು ಸಂಗ್ರಹಣೆಯಾಗದೆಯೇ ಖರೀದಿಗಳ ಮೇಲಿನ ತೆರಿಗೆ ಜಮೆಗೆ ಅನುಮತಿಸಿದ್ದುದು, ಇತ್ಯಾದಿಗಳ ಕಾರಣ ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದಂತಹ ತೆರಿಗೆಯು ₹ 13.49 ಕೋಟಿ (ಬಡ್ಡಿ ಮತ್ತು ದಂಡವೂ ಸೇರಿ) ಆಗಿದ್ದಿತು.

**(ಕಂಡಿಕೆ 2.10)**

13 ವರ್ತಕರುಗಳಿಗೆ ಸಂಬಂಧಿಸಿದಂತೆ ಉಪ–ಗುತ್ತಿಗೆದಾರರುಗಳಿಗೆ ಮಾಡಲಾಗಿದ್ದಂತಹ ಪಾವತಿಗಳನ್ನು ತಪ್ಪಾಗಿ ಅನುಮತಿಸಿದ್ದ ಕಾರಣ ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದಂತಹ ತೆರಿಗೆಯ ಮೊತ್ತವು ಬಡ್ಡಿ ಮತ್ತು ದಂಡವೂ ಒಳಗೊಂಡಂತೆ ₹ 3.01 ಕೋಟಿ ಆಗಿದ್ದಿತು.

**(ಕಂಡಿಕೆ 2.11)**

ಇ–ಯುಪಿಎಎಸ್ಎಸ್ (ಜ–ಗಿಕಚಿಖಖ) ಮಾಡ್ಯೂಲಿನ ಅಡಿಯಲ್ಲಿ ಖರೀದಿಗಳ ಮೇಲಿನ ತೆರಿಗೆ ಜಮೆಯನ್ನು ಪರಿಶೀಲಿಸಲಾಗಿ 140 ವರ್ತಕರುಗಳು ₹ 16.82 ಕೋಟಿ, ಮಾರಾಟಗಳ ಮೇಲಿನ ತೆರಿಗೆಯನ್ನು (ಬಡ್ಡಿ ಹಾಗೂ ದಂಡವೂ ಸೇರಿದಂತೆ) ಪಾವತಿಸಿರಲಿಲ್ಲ.

**(ಕಂಡಿಕೆ 2.13)**

## III ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕ

**ಕಂಡಿಕೆಗಳು**

ತಪ್ಪಾದ ಮಾರ್ಗಸೂಚಿ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದುದು, ದಸ್ತಾವೇಜುಗಳನ್ನು ತಪ್ಪಾಗಿ ವರ್ಗೀಕರಿಸಿದ್ದುದು, ವಿಶೇಷ ನಿರ್ದೇಶನಗಳಿಗೆ ಬದ್ಧತೆಯನ್ನು ತೋರಿಸದಿದ್ದುದು, ಇತ್ಯಾದಿಗಳು 19 ಉಪ-ನೋಂದಣಿ ಅಧಿಕಾರಿಗಳ ಕಚೇರಿಗಳಲ್ಲಿ 73 ಪ್ರಕರಣಗಳಲ್ಲಿ ದಸ್ತಾವೇಜುಗಳನ್ನು ಕಡಿಮೆ ಪ್ರಮಾಣದಲ್ಲಿ ಮೌಲ್ಯಮಾಪನ ಮಾಡುವಲ್ಲಿಗೆ ದಾರಿ ಮಾಡಿಕೊಟ್ಟಿದ್ದವು ಹಾಗೂ ಇದು ₹ 16.18 ಕೋಟಿ ಮೊತ್ತದಷ್ಟು ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿ ಪರಿಣಮಿಸಿದ್ದಿತು.

**(ಕಂಡಿಕೆ 3.4)**

ಮಾರಾಟ-ಪತ್ರಗಳು ಮತ್ತು ಬಿಡುಗಡೆ-ಪತ್ರಗಳ ಮೇಲೆ ತಪ್ಪಾದ ದರಗಳನ್ನು ಅನ್ವಯಿಸಿದ್ದು 32 ಪ್ರಕರಣಗಳಲ್ಲಿ ₹ 10.46 ಕೋಟಿ ಮೊತ್ತದಷ್ಟು ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿಗೆ ದಾರಿ ಮಾಡಿಕೊಟ್ಟಿದ್ದಿತು.

**(ಕಂಡಿಕೆ 3.5 ಮತ್ತು 3.7)**

ಐದು ಉಪ-ನೋಂದಣಿ ಅಧಿಕಾರಿಗಳ ಕಚೇರಿಗಳಲ್ಲಿ 50 ಜಂಟಿ ಅಭಿವೃದ್ಧಿ ಒಡಂಬಡಿಕೆಗಳಲ್ಲಿ ತಪ್ಪಾದ ದರಗಳನ್ನು ಅಳವಡಿಸಿಕೊಂಡಿದ್ದುದು, ಕಡಿಮೆ ಪ್ರಮಾಣದಲ್ಲಿ ಮೌಲ್ಯವನ್ನು ಹೊಂದಿದ್ದ ಪಾಲಿನ ಮೇಲೆ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ತಪ್ಪಾಗಿ ವಿಧಿಸಿದ್ದುದು ₹ 9.44 ಕೋಟಿ ಮೊತ್ತದಷ್ಟು ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿಗೆ ದಾರಿ ಮಾಡಿಕೊಟ್ಟಿದ್ದಿತು.

**(ಕಂಡಿಕೆ 3.6)**

ಒಂದು ಉಪ-ನೋಂದಣಿ ಅಧಿಕಾರಿಯವರ ಕಚೇರಿಯಲ್ಲಿ ಮುದ್ರಾಂಕ ಸುಂಕ, ನೋಂದಣಿ ಶುಲ್ಕ, ಇತ್ಯಾದಿಗಳ ಕಡೆಗೆ ಸಂಗ್ರಹಿಸಿದ್ದಂತಹ ₹ 3.33 ಕೋಟಿ ಮೊತ್ತವನ್ನು ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆ ಮಾಡಿರಲಿಲ್ಲ/ಪಾವತಿಸಿರಲಿಲ್ಲ.

**(ಕಂಡಿಕೆ 3.8)**

## IV ಖನಿಜಗಳ ಸ್ವೀಕೃತಿಗಳು

**ಕಂಡಿಕೆಗಳು**

ಖನಿಜ ರವಾನೆ ಪರವಾನಿಗೆಗಳನ್ನು ಪಡೆದುಕೊಳ್ಳದೆಯೇ ಅಪ್ರಧಾನ ಖನಿಜಗಳ ಸಾಗಣೆ ಮಾಡಿದ್ದಕ್ಕಾಗಿ ₹ 6.47 ಕೋಟಿ ಮೊತ್ತದಷ್ಟು ರಾಜಧನವನ್ನು ಪಾವತಿಸುವಂತೆ ಅಪ್ರಧಾನ ಖನಿಜಗಳ ಗಣಿಗಾರಿಕೆ ಗುತ್ತಿಗೆಗಳನ್ನು ಹೊಂದಿರುವವರನ್ನು ಒತ್ತಾಯಿಸಲಿಲ್ಲ.

**(ಕಂಡಿಕೆ 4.4)**

ಇಲಾಖೆಯೊಂದಿಗೆ ಲೆಕ್ಕಪರಿಶೋಧನೆಯು ನಡೆಸಿದ ಜಂಟಿ-ಪರೀಕ್ಷಣೆಗಳು ಗುತ್ತಿಗೆಗಳ ಅವಧಿ ಮುಕ್ತಾಯಗೊಂಡಿರುವಂತಹ ಅಥವಾ ಗುತ್ತಿಗೆಗಳನ್ನು ರದ್ದುಗೊಳಿಸಲಾಗಿರುವಂತಹ ಗಣಿಗಾರಿಕೆ ಪ್ರದೇಶಗಳಿಂದ ಅಥವಾ ಅನುಮತಿಯಿಲ್ಲದ ಪ್ರದೇಶಗಳಿಂದ ಕಟ್ಟಡ ಕಲ್ಲುಗಳನ್ನು ಅಕ್ರಮ/ಕಾನೂನುಬಾಹಿರವಾಗಿ ಹೊರತೆಗೆದಿದ್ದಂತಹ ಆರು ಪ್ರಕರಣಗಳನ್ನು ತೋರಿಸಿಕೊಟ್ಟವು. ಈ ಆರು ಪ್ರಕರಣಗಳಲ್ಲಿ ವಿಧಿಸಬೇಕಾಗಿದ್ದಂತಹ ರಾಜಧನ ಮತ್ತು ದಂಡವು ₹ 82.47 ಲಕ್ಷ ಮೊತ್ತದಷ್ಟು ಆಗಿದ್ದಿತು.

**(ಕಂಡಿಕೆ 4.5)**